**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.160/2021**

**(ಚಾ.ಸಾ.2/ಪ್ರಾ.ಸಾ.4)**

ತಾಃ 09.11.2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಫಾರುಖ ಖಾನ್ |
| ತಂದೆಯ ಹೆಸರು | ಲೇಟ್ ಇಸ್ಮಾಯಿಲ್ |
| ವಯಸ್ಸು | 61 ವರ್ಷ |
| ಉದ್ಯೋಗ | ಆಟೋ ಚಾಲಕ |
| ವಾಸ ಸ್ಥಳ | ಮಹಾಲಕ್ಷ್ಮಿನಗರ, ಬೆಟ್ಟದಾಸನಪುರ, ಬೆಂಗಳೂರು ನಗರ. |

**<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ</u>**

ನನಗೆ ಚಾಸಾ.1 ರವರ ಪರಿಚಯ ಇಲ್ಲ. ಅದೇ ರೀತಿ ಮೃತ ಸೈಯದ್ ಅಫ್ಜಲ್ ಇವರ ಪರಿಚಯ ಇಲ್ಲ. ಸಾಕ್ಷಿದಾರರು ನಿ.ಪಿ.2 ಮಹಜರ್ ನಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಮು.ಮಾ.1 ರಿಂದ 8 ರ ವಸ್ತುಗಳನ್ನು ಹಾಕಿರುವ ಬಿಳಿ ಬಟ್ಟೆಯ ಮೇಲೆ ಅಂಟಿಸಿರುವ ಚೀಟಿಯನ್ನು ನೋಡಿ ಅದರಲ್ಲಿ ಇರುವ ಸಹಿ ನನ್ನದಲ್ಲ ಎಂದು ನುಡಿದಿರುತ್ತಾರೆ. ಸುಮಾರು 2 ವರ್ಷದ ಹಿಂದೆ ನಾನು ಮನೆಯಲ್ಲಿ

ಇದ್ದಾಗ ನನ್ನ ಮನೆಗೆ ಬಂದು ನನ್ನನ್ನು ಬೆಟ್ಟದಾಸನಪುರದಲ್ಲಿ ಇರುವ ಸ್ಮಶಾನದ ಹತ್ತಿರ ಕರೆದುಕೊಂಡು ಹೋಗಿದ್ದರು. ಸದರಿ ಸ್ಥಳದಲ್ಲಿ ಯಾರೋ ಒಬ್ಬ ವ್ಯಕ್ತಿ ಸತ್ತು ಬಿದ್ದಿದ್ದು ಆತನನ್ನು ತೋರಿಸಿ ಆ ವ್ಯಕ್ತಿ ನಿಮ್ಮ ಏರಿಯಾದವರಾ ಎಂದು ಪೊಲೀಸರು ಕೇಳಿದಾಗ ಅಲ್ಲ ಎಂದು ಹೇಳಿರುತ್ತೇನೆ. ಪೊಲೀಸರು ಸದರಿ ಸ್ಥಳದಲ್ಲಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಮುದ್ದೆ ಮಾಲುಗಳು ಬಿದ್ದಿರುತ್ತದೆಯಾ ನೋಡಿ ಎಂದು ತಿಳಿಸಿದ್ದು ನಾನು ಆ ಸಮಯದಲ್ಲಿ ಅಷ್ಟಾಗಿ ಗಮನಿಸಿರುವುದಿಲ್ಲ. ಸದರಿ ಸ್ಥಳದಲ್ಲಿ ಏನೇನು ವಸ್ತುಗಳು ಬಿದ್ದಿದ್ದವು ಎಂದು ನನಗೆ ಗೊತ್ತಿಲ್ಲ.

2. ಪೊಲೀಸರು ಸ್ಥಳದಲ್ಲಿ ಏನೇನೋ ವಸ್ತುಗಳನ್ನು ತೆಗೆದುಕೊಂಡಿದ್ದು ಫೋಟೋ ತೆಗೆಯುತ್ತೇವೆ ಎಂದು ಹೇಳಿ ಫೋಟೋ ತೆಗೆದಿರುತ್ತಾರೆ. ಸಾಕ್ಷಿದಾರರು ನಿ.ಪಿ.3 ರಿಂದ 6 ರ ಫೋಟೋಗಳನ್ನು ನೋಡಿ ಸ್ಥಳ ಹಾಗೂ ಅದೇ ಮೃತ ದೇಹ ಬಿದ್ದಿದ್ದು ಎಂದು ನುಡಿದಿರುತ್ತಾರೆ. ಪೊಲೀಸರು ನನ್ನನ್ನು ಸದರಿ ಸ್ಥಳಕ್ಕೆ ಎಷ್ಟು ಗಂಟೆಗೆ ಕರೆದುಕೊಂಡು ಹೋದರು ಎಂದು ನನಗೆ ಹೇಳಲು ಆಗುವುದಿಲ್ಲ. ಪೊಲೀಸರು ಆ ದಿನ ಮತ್ತೊಬ್ಬ ವ್ಯಕ್ತಿಯನ್ನು ಆ ಸ್ಥಳಕ್ಕೆ ಕರೆದುಕೊಂಡು ಬಂದಿದ್ದು ಆ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ. ನಿ.ಪಿ3, 4 ಹಾಗೂ 6 ರ ಫೋಟೋದಲ್ಲಿ ನಾನು ಹಾಗೂ ಮತ್ತೊಬ್ಬ ವ್ಯಕ್ತಿ ಇರುವುದು ಕಂಡು ಬರುತ್ತದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ.

ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

3. ದಿಃ01.02.2021 ರಂದು ಕೊಲೆಯಾದ ಸ್ಥಳದಲ್ಲಿ ರಾತ್ರಿ 9.55 ರಿಂದ 11.20 ರ ಸಮಯದಲ್ಲಿ ನಿ.ಪಿ.2 ಕ್ಕೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಸ್ಥಳದಲ್ಲಿ ನನ್ನ ಸಹಿ ಪಡೆದಿಲ್ಲ ಆದರೆ ಪೊಲೀಸ್ ಠಾಣೆಯಲ್ಲಿ ನನ್ನ ಸಹಿ ಪಡೆದಿದ್ದಾರೆ ಎಂದು ನುಡಿದಿರುತ್ತಾರೆ. ಪೊಲೀಸರು ಕೊಲೆ ಆಗಿರುವುದಾಗಿ ಹೇಳಿ ನನ್ನನ್ನು ಹಾಗೂ ಚಾಸಾ.3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು ಸ್ಥಳವನ್ನು ಚಾಸಾ.1 ರವರು ತೋರಿಸಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ಪೊಲೀಸರು ಸದರಿ ಸ್ಥಳದ ಅಕ್ಕ ಪಕ್ಕದಲ್ಲಿ ಪರಿಶೀಲನೆ ಮಾಡಿದ್ದು ಮೃತ ದೇಹದ ಕಾಲಿನ ಪಕ್ಕದಲ್ಲಿ ಬಿದ್ದಿದ್ದ ಮು.ಮಾ.1 ಅನ್ನು ಜಪ್ತಿ ಪಡಿಸಿ ಪ್ಯಾಕ್ ಮಾಡಿ ನನ್ನ ಸಹಿಯನ್ನು ಪಡೆದಿದ್ದರು ಎಂದರೆ ಸರಿಯಲ್ಲ. ನಂತರ ಪೊಲೀಸರು ಮೃತ ದೇಹದ ತಲೆಯಲ್ಲಿ ಇದ್ದ ರಕ್ತದ ಮಾದರಿಯನ್ನು ನನ್ನ ಸಮಕ್ಷಮ ಹತ್ತಿಯಿಂದ ಸಂಗ್ರಹಿಸಿ ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿದ್ದರು ಎಂದರೆ ಸರಿಯಲ್ಲ.

4. ನಂತರ ಮೃತ ದೇಹದ ಬಲ ಭಾಗದಲ್ಲಿ ಬಿದ್ದಿದ್ದ ರಕ್ತದ ಮಣ್ಣನ್ನು ಹಾಗೂ ಮೃತದೇಹದ ಮುಂಭಾಗದಲ್ಲಿ ಬಿದ್ದಿದ್ದ ಮಾದರಿ ಮಣ್ಣನ್ನು ಪೊಲೀಸರು ತೆಗೆದುಕೊಂಡು ಪ್ರತ್ಯೇಕ ಪ್ಲಾಸ್ಟಿಕ್ ಡಬ್ಬಕ್ಕೆ ಹಾಕಿ ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ನನ್ನ

ಸಹಿ ಇರುವ ಚೀಟಿಯನ್ನು ಅಂಟಿಸಿದ್ದರು ಎಂದರೆ ಸರಿಯಲ್ಲ. ಮೃತ ದೇಹದ ಬಲ ಭಾಗದ ಜೇಬಿನಲ್ಲಿ ಇದ್ದ ಒಂದು ಕೀ ಪ್ಯಾಡ್ ಮೊಬೈಲ್ ಫೋನ್ ಅನ್ನು ಚಾಸಾ.1 ರವರು ತೆಗೆದು ಪೊಲೀಸರು ಮುಂದೆ ಹಾಜರುಪಡಿಸಿದ್ದು ಅದನ್ನು ನನ್ನ ಸಮಕ್ಷಮ ಬಿಳಿ ಬಟ್ಟೆಯಿಂದ ಪ್ಯಾಕ್ ಮಾಡಿ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೂ ಮೊದಲು ಮೊಬೈಲ್ ಫೋನ್ ಲಾಕ್ ಅನ್ನು ಒಪನ್ ಮಾಡಿದಾಗ ಮೊಬೈಲ್ ಫೋನ್ ನಂಬರ್ 8884647981 ಆಗಿರುವುದು ಹಾಗೂ ಅದರ ಸಿಮ್ ವೊಡಾಫೋನ್ ಕಂಪನಿಯ ಸಿಮ್ ಎಂದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಮೃತ ದೇಹದ ತಲೆಯ ಎಡ ಭಾಗದಲ್ಲಿ ಸಿಮೆಂಟ್ ಹಾಲೋಬ್ಲಾಕ್ ಬಿದ್ದಿದ್ದು ಅದರ ಕೆಳಗೆ ಗ್ರಾನೈಟ್ ಟೈಲ್ಸ್ ಚೂರುಗಳು ಬಿದ್ದಿದ್ದು ಅವುಗಳನ್ನು ಪೋಲಿಸರು ನಮ್ಮ ಸಮಕ್ಷಮ ಜಪ್ತಿ ಪಡಿಸಿ ಬಿಳಿ ಬಟ್ಟೆಯಲ್ಲಿ ಹಾಕಿ ನಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿದ್ದರು ಎಂದರೆ ಸರಿಯಲ್ಲ.

5. ಕೃತ್ಯ ಸ್ಥಳದ ಪಕ್ಕದಲ್ಲಿ ಒಂದು ಕಬಾಬ್ ಪೆಟ್ಟಿಗೆ ಅಂಗಡಿ ಇರುತ್ತದೆ ಎಂದರೆ ನನಗೆ ತಿಳಿದಿಲ್ಲ. ಪೆಟ್ಟಿಗೆ ಅಂಗಡಿಯ ಪಕ್ಕದಲ್ಲಿ ಹೊಂಗೆ ಮರ ಇದ್ದು ಅದರ ಹತ್ತಿರ ಬಿದ್ದಿದ್ದ ಬಟನ್ ಸ್ಟೀಲ್ ಚಾಕುವನ್ನು ಪೋಲಿಸರು ಜಪ್ತಿ ಪಡಿಸಿ ಬಿಳಿ ಬಟ್ಟೆಯಿಂದ ಪ್ಯಾಕ್ ಮಾಡಿ ನಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿದ್ದರು ಎಂದರೆ ಸರಿಯಲ್ಲ. ನಿ.ಪಿ.4 ರಲ್ಲಿ ಕಂಡು ಬರುವ ಸ್ಕೂಟರ್ ಸ್ಥಳದಲ್ಲಿ ಬಿದ್ದಿತ್ತು ಎಂದರೆ ಸರಿ. ಸದರಿ ಸ್ಕೂಟರ್ ಅನ್ನು ಪೋಲಿಸರು ಜಪ್ತಿ ಪಡಿಸಿದ್ದರು ಎಂದರೆ ನನಗೆ ತಿಳಿದಿಲ್ಲ. ನಿ.ಪಿ.2 ಅನ್ನು ಸ್ಥಳದಲ್ಲಿ ತಯಾರಿಸಿ ನಮಗೆ ಓದಿ ಹೇಳಿ ಸ್ಥಳದಲ್ಲಿ ನಮ್ಮ ಸಹಿಯನ್ನು

ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಸಹಿಯನ್ನು ಪೋಲಿಸ್ ಠಾಣೆಯಲ್ಲಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಪಿ.3 ರಿಂದ 6 ರ ಫೋಟೋಗಳನ್ನು ಸ್ಥಳಕ್ಕೆ ಬಂದಿದ್ದ ಛಾಯಾಗ್ರಾಹಕರು ತೆಗೆದಿರುತ್ತಾರೆ ಎಂದರೆ ಸಾಕ್ಷಿಯು ಯಾರೋ ಮೊಬೈಲ್ ನಲ್ಲಿ ಫೋಟೋ ತೆಗೆದಿರುವುದಾಗಿ ನುಡಿಯುತ್ತಾರೆ. ಮಾನ್ಯ ಪಿಪಿ ರವರು ಸಾಕ್ಷಿದಾರರ ಸಹಿಯನ್ನು ಒಂದು ಬಿಳಿ ಹಾಳೆಯ ಮೇಲೆ ಪಡೆದುಕೊಳ್ಳಲು ಅನುಮತಿ ಕೋರಿದ್ದು ಅದರಂತೆ ಅನುಮತಿ ನೀಡಿರುತ್ತದೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ 3 ಸಹಿಗಳನ್ನು ಮಾಡಿದ್ದು ಅದನ್ನು ಗುರುತಿಸುವ ಸಲುವಾಗಿ ಸಾಕ್ಷಿದಾರರ ಸಹಿ ಇರುವ ಪೇಪರ್ ಅನ್ನು ನಿ.ಸಿ.1 ಎಂದು ಗುರುತಿಸಲಾಯಿತು. ನಿ.ಸಿ 1 ರಲ್ಲಿ ಕಂಡು ಬರುವ ಸಹಿಗಳು ಮು.ಮಾ.1 ರಿಂದ 8 ಅನ್ನು ಪ್ಯಾಕ್ ಮಾಡಿ ಬಿಳಿ ಬಟ್ಟೆಯ ಮೇಲೆ ಅಂಟಿಸಿದ ಚೀಟಿಗಳಲ್ಲಿ ಇರುವ ಸಹಿ ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. ಮು.ಮಾ.1 ರಿಂದ 8 ರ ಮೇಲೆ ಇರುವ ಸಹಿಗಳು, ನಿ.ಪಿ.2(ಬಿ) ಸಹಿ ಹಾಗೂ ನಿ.ಸಿ.1 ರಲ್ಲಿ ಇರುವ ಸಹಿ ಒಂದೇ ಆಗಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ.1 ರಿಂದ 8 ರ ವಸ್ತುಗಳನ್ನು ಹಾಗೂ ನಿ.ಪಿ.4 ರಲ್ಲಿ ಕಂಡು ಬರುವ ದ್ವಿ-ಚಕ್ರ ವಾಹನ ನಮ್ಮ ಸಮಕ್ಷಮ ವಶಪಡಿಸಿಕೊಂಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಪರ ಶ್ರೀ. ಕೆ ಆರ್ ಎಸ್ ವಕೀಲರಿಂದಃ**

6. ಪೋಲಿಸರ ಬಲವಂತಕ್ಕೆ ನಾನು ಸ್ಥಳಕ್ಕೆ ಹೋಗಿ ನಿಂತಾಗ ನಿ.ಪಿ.3, 4 ಹಾಗೂ 6 ರ ಫೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.